ಕವಿತೆಯೊಂದಿಗೆ ಬರವಣಿಗೆ ಶುರು ಮಾಡಿದ ಮೈತ್ರೇಯಿಣಿ ಗದಿಗೆಪ್ಪಗೌಡರ ಈಗ ಕಥೆಗಳ ಹೆಣಿಗೆಯಲ್ಲಿ ಆಸಕ್ತರು. ಮೂಲತಃ ಹುಬ್ಬಳ್ಳಿಯವರು. ಬೆಳಗಾವಿಯ ರಾಣಿ ಚೆನ್ನಮ್ಮ ವಿಶ್ವವಿದ್ಯಾಲಯದ ಕನ್ನಡ ವಿಭಾಗದ ಸಹಾಯಕ ಪ್ರಾಧ್ಯಾಪಕಿ.

ಇಬ್ರಿಗೂ. ಶೆಟ್ರು ಮತ್ತು ಗೌಡ್ರು ಕೂಡಾ ಒಟ್ಟಿಗೆ ಬೆಳೆದವರು. ಹಿಂಗಾಗಿ, ಎರಡು ಮನೆತನಗಳು ಬಹಳ ಅನೋನ್ಯವಾಗಿದ್ವು.

ಹತ್ತೂರು ಗೌಡಕಿ ಹೊತ್ತ ಬಸಲಿಂಗಪ್ಪನ ಹೆಂಡತಿ ಗೌರಮ್ಮ, ಸದಾ ನಯವಿನಯದಿಂದ ಇರುವಂತಾಕಿ. ಕರ್ಮಧರ್ಮಗಳ ಮರ್ಮ ಅರಿತು ಬಾಳುವಂತಾಕಿ ನ್ಯಾಯನಿಷ್ಠುರಿ. ಯಾರರೆ ಆಕಿ ಬಾಕಲಿಗೆ ಕಷ್ಟ ಅಂತ ಬಂದರ ಸಾಕು, ತನ್ನ ಮಕ್ಕಳ ತರಾ ಅವರಿಗೆ ಪೋಲುಮಿ ಮಾಡಿ ಕಳಸಾಕಿ, ಗೌರಮ್ಮನ ಈ ನಡತೆ ಕಂಡ ಊರ ಜನ ಆಕಿ ಮನ್ಯಾಗ ಸದಾ ಜೋಳಿಗಿ ತುಂಬಲಿ, ತೊಟ್ಟಿಲಾ ತೂಗಲಿ ಅಂತಾ ಹರಕೆ ಕೊಡತಿದ್ರು. ಹಿಂಗಾಗಿ, ಮೂರು ಜನ ಗಂಡಮಕ್ಕಳು ಆರು ಜನ ಹೆಣ್ಣುಮಕ್ಕಳ ತಾಯಿಯಾದ್ರೂ ಹರೆದ ಹುಡುಗಿ ತರಾ ಕಾಣತಿದ್ಲು.

ಸಾವಂತ್ರಿ ಹೆಣದ ಮುಂದ ಕುಳಿತ ಮಗಳು ಶಾರವ್ವ ಬಾಯಿ ಬಡಕೊತ ಅಳಾಕತಿದ್ಲು. ಸೊಸಿ ಕಮಲವ್ವ ಸೆರಗು ಮುಚಕೊಂಡು ಅತ್ತವರಂಗ ನಾಟಕಾ ಮಾಡಾಕತ್ತಿದ್ಲು. ಇನ್ನೇನು ದೊಡ್ಡಬೀಗರು ಅಡ್ಡ ಬೀಗರು ಎಲ್ಲಾ ಬಂದಂಗ ಬಂದಂಗ ಓಣಿ ತುಂಬ, ಅಂಗಳ ತುಂಬ ಜನಾ ಬಹಳ ಸೇರಿದ್ರು. ಬಸಲಿಂಗಪ್ಪ ಗೌರಮ್ಮ ಒಳಗ ಬಂದು, ಹೆಣಕ್ಕ ಪೂಜೆ ಮಾಡಿಸಿ ಸಾವಂತ್ರಿ ಆತ್ಮಕ್ಕ ಶಾಂತಿ ಸಿಗಲಿ ಅಂತಾ ಬೇಡಕೊಂಡ್ರು.

ಆ ದಿನ ನಡೆದ ಘಟನೆ, ಗೌರಮ್ಮನ ನ್ಯಾಯ, ನಿಷ್ಠೆ, ಗೌರವ, ಧರ್ಮಪರತೆಯನ್ನು ಪಣಕ್ಕಿಟ್ಟಿತ್ತು. ನೋಡ ನೋಡತಾ ಹೆಣದ ಮುಂದೆ ಜಗಳ ಶುರು ಆತು. ಸೇರಿದ ಎಲ್ಲಾ ಜನರಿಗೆ ಏನ ನಡದೈತಿ ಅಂತಾ ತಿಳಿಯೋಕಿನ ಮುಂಚೆ, ಸೊಸೆ ಕಮಲವ್ವ, ಸತ್ತು ಹೋದ ಅತ್ತಿ ಗಲ್ಲಾ ತಿವದು ತಿವದು, 'ಹೇಳ ಏನ ಮಾಡಿ, ಹೇಳ ಎಲ್ಲಿ ಇಟ್ಟಿ ಹೇಳ' ಅಂತಾ ಒಂದೇ ಸವನ ಕೇಳತಿದ್ಲು. ಮಗಳು ಶಾರವ್ವ ಒಮ್ಮೆಲೇ ಗೌರಮ್ಮ ಗೌಡಶಾನಿ ಜೊತೆಯಲ್ಲಿ ವಾದಕ್ಕ ಇಳಿದ್ಲು. ನೋಡ ನೋಡತ ಸಾವಿನ ಮನಿ ರಣರಂಗ ಆತು. ಗೌರಮ್ಮ ಗೌಡಶಾನಿಗೆ ಏನೂ ತಿಳಿದಂಗ ಆಗಿ ಮಾತ ಬರದಂಗ ಆತು. ಒಮ್ಮೆಲೇ ಹಿಂಗ ಆಕ್ಕೈತಿ ಅಂತಾ ಆಕಿಗೂ ತಿಳಿದಿರಲಿಲ್ಲ. ಪ್ರೀತಿಯ ಗೆಳತಿ ಸಾವಂತ್ರಿ ಸತ್ತದ್ದು ಒಂದು ನೋವಾದ್ರ, ಸದ್ಯ ತನ್ನ ಮೇಲೆ ಬಂದ ಅಪವಾದಕ್ಕೆ ಏನ ಉತ್ತರಾ ಕೊಡಬೇಕೋ ತಿಳಿದ ಗರ ಬಡದವರಂಗ ನಿಂತುಬಿಟ್ಲು. ಒಂದು ಘಳಿಗೆಯಲ್ಲಿ ನಡೆದ ಅನಿರೀಕ್ಷಿತ ಘಟನೆಯಿಂದ ಗೌಡಶಾನಿಗೆ ಏನ ಮಾತಾಡಬೇಕು ಅನ್ನೋದೆ ಗೊತ್ತಾಗಲಿಲ್ಲ. ಹೆಣದ ಮುಂದೆ ನಡಿತಿರುವ ಜಗಳದ ಸಂಗತಿ ತಿಳಿದು ಶೆಟ್ರು ಮತ್ತು ಗೌಡರು ಒಳಗೆ ಬಂದರು. ಸೊಸಿ ಕಮಲವ್ವ, ಮಗಳು ಶಾರವ್ವ ಇಬ್ಬರೂ ಗೌರಮ್ಮನೊಂದಿಗೆ ಜಗಳಾಡಕತ್ತಿದ್ದು ನೋಡಿ ಬಹಳ ಗಾಬರಿಯಾದರು. ವಿಷಯ ಏನು ಅಂತಾ ಗೊತ್ತಾಗದ ಶೆಟ್ರು, ಜೋರಾಗಿ ಬಾಯಿ ಮಾಡತಿರುವ ಎಲ್ಲರನ್ನು ಸುಮ್ಮನೆ ಮಾಡಿ ಕೇಳಿದ್ರು. ಪ್ರೀತಿಯ ಹೆಂಡತಿ ಸಾವಂತ್ರಿ ಸಾವಿನ ನೋವಿನಲ್ಲಿರುವ ಶೆಟ್ರಿಗೆ ಹೆಣದ ಮುಂದೆ ನಡೆಯುತ್ತಿರುವ ಈ ಜಗಳ ಕಂಡು ಇನ್ನಷ್ಟು ನೋವಾತು.

ಶಾರವ್ವನ ಜೋರಾದ ಅಳು ಕಮ್ಮಿ ಆಗಿತ್ತು. ಸುಮ್ಮನೆ ಅತ್ತವರಂತೆ ಸೋಗು ಹಾಕಿದ್ದ ಕಮಲವ್ವ, ಪೂರಾ ನಿಚ್ಚಳವಾಗಿ ಜಗಳಾ ತಗೆದಿದ್ಲು. ಮಾವನ ಮಾತಿಗೆ ಕಮಲವ್ವ ಜೋರಾದ ದನಿಲೇ 'ಮಾವಾರ ನೀವ ನೋಡ್ರಿ... ಗೌರವ್ವ ಗೌಡಶಾನಿ ಒಂದು ಗಂಟ ತಂದಾಳ. ಅದು ಅತ್ತಿಯವರ ದಾಗೀನಿನ ಗಂಟು. ಅದರಾಗ ಗೆಜ್ಜೆಟೀಕಿ ಮತ್ತು ಮುತ್ತಿನ ಬುಗಡಿ ಅದಾವು. ಗುಂಡಿನ ಸರಾ ಕಾಣತಿಲ್ಲಾ. ಅಲ್ಲದ ಮುತ್ತಿನ ಬುಗುಡಿ ಒಂದೇ ಅದ. ಅವು ಜೋಡಿ ಇದ್ವು' ಅಂತಾ ಸೊಸಿ ಜೋರಾಗಿ ಬಾಯಿ ಮಾಡಿದ್ಲು. ಮಗಳು ಶಾರವ್ವಗ ಮಾತ್ರ ಗೊತ್ತಿತ್ತು ಅವ್ವ ಸಾವಂತ್ರಿಯ ಆಭರಣಗಳು ಏನೇನು ಇದ್ವು ಅಂತಾ. ಶಾರವ್ವಗ ತಿಳಿದಿರುವ ಪ್ರಕಾರ ಸಾವಂತ್ರಿಗೆ ತವರುಮನಿಯವರು ಹೊಸಮಾಲಗಿತ್ತಿಯಾಗಿ